## *Form No.4.*

## *Deposition Sheet( R.P.52)*

ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

**CC 8/2024**

**CW3**

**PW2**

| | | |
|---|---|---|
| ಸಾಕ್ಷಿಯ ಹೆಸರು | ಃ | ಸಿದ್ದೇಶ್ |
| ತಂದೆ ಹೆಸರು | ಃ | ರವೀಂದ್ರ ಗೌಡ |
| ಪ್ರಾಯ | ಃ | 35 ವರ್ಷ |
| ಉದ್ಯೋಗ | ಃ | ಪೋಲೀಸ್, ಮಣಿಪಾಲ |
| ವಾಸ | ಃ | ಮಣಿಪಾಲ |

ದಿನಾಂಕ **:28.02.2025** ರಂದು ಪಿಡಬ್ಲ್ಯೂ - 2 / ಸಿಡಬ್ಲ್ಯೂ - 3 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಹಿರಿಯ ಸ.ಸ.ಅ. ರವರಿಂದಃ

ನಾನು ದಿನಾಂಕ 2015 ರಿಂದ ದಿನಾಂಕ 2022 ರವರೆಗೆ ಅಜೆಕಾರು ಪೋಲೀಸ್ ಠಾಣೆಯಲ್ಲಿ ಪಿ.ಸಿ. ಆಗಿ ಕೆಲಸ ನಿರ್ವಹಿಸಿದ್ದೇನೆ. ದಿನಾಂಕ 29.01.2022 ರಂದು ನಾನು, ಚಾಸಾ 1 ಮತ್ತು 4 ರವರೊಂದಿಗೆ ರಾತ್ರಿ ಪಹರೆಯಲ್ಲಿ ಇದ್ದಾಗ ಬೆಳಗ್ಗಿನ ಜಾವ 4 ಗಂಟೆಯ ಸಮಯದಲ್ಲಿ ದೊಡ್ಡರಂಗಡಿ ಗ್ರಾಮದ

CC 8/2024
CW3
PW2

ಪ್ರಾಥಮಿಕ ಆರೋಗ್ಯ ಕೇಂದ್ರದ ಬಳಿ ಟೆಂಪೋ ಒಂದು ಚಾಲನಾ ಸ್ಥಿತಿಯಲ್ಲಿ ನಿಂತಿರುತ್ತದೆ. ಸದರಿ ವಾಹನದ ಚಾಲಕನ ಬಳಿ ವಿಚಾರಿಸಿದಾಗ ನಮ್ಮನ್ನು ನೋಡಿದ ಚಾಲಕ ವಾಹನವನ್ನು ವೇಗವಾಗಿ ಚಾಲನೆ ಮಾಡಿಕೊಂಡು ಹೋಗಿರುತ್ತಾನೆ. ನಮಗೆ ಅನುಮಾನ ಬಂದು ನಾವು ಇಲಾಖಾ ಜೀಪಿನಲ್ಲಿ ಆತನನ್ನು ಬೆನ್ನಟ್ಟಿದ್ದು, ಟೆಂಪೋವಿನ ಚಾಲಕನು ಟೆಂಪೋವನ್ನು ಹರಿಕಂಡಿಗೆ, ಪೆರ್ಡೂರು, ಕುಕ್ಕೆಹಳ್ಳಿ , ಕೆ.ಜಿ. ರೋಡ್, ಸಂತೆ ಕಟ್ಟೆ , ಕಿನ್ನಿಮುಲ್ಕಿ , ಸಂಪಿಗೆ ನಗರ , ಪಿತ್ರೋಡಿ , ಉದ್ಯಾವರ ತಲುಪಿ ಒಳರಸ್ತೆಗಳಲ್ಲಿ ತಿರುಗುತ್ತಾ ಉದ್ಯಾವರ ಹೈವೆಗೆ ಬಂದು, ಅಲ್ಲಿಂದ ಕರಾವಳಿ ಜಂಕ್ಷನ್ ಮೂಲಕ ಉಡುಪಿ , ಮಣಿಪಾಲ , ಪರ್ಕಳದ ಮೂಲಕ ಹಿರಿಯಡ್ಕದ ಪೆಟ್ರೋಲ್ ಪಂಪ್ ಬಳಿ ರಸ್ತೆಯ ಬದಿಯಲ್ಲಿ ವಾಹನವನ್ನು ನಿಲ್ಲಿಸಿ, ಅದರಲ್ಲಿದ್ದ ಚಾಲಕ ರಸ್ತೆಯ ಬದಿಯಲ್ಲಿ ಓಡಿಹೋಗಿರುತ್ತಾನೆ. ಆಗ ನಾನು ಮತ್ತು ಚಾಸಾ 1 ರವರು ಬೆನ್ನಟ್ಟಿದ್ದು, ಆಗ ಸಮಯ ಬೆಳಗ್ಗಿನ ಜಾವ 5.45 ಆಗಿರುತ್ತದೆ. ಆತನು ತಪ್ಪಿ ಸಿಕೊಂಡು ಹಾಡಿಯಲ್ಲಿ ಓಡಿಹೋಗಿರುತ್ತಾನೆ. ನಾವು ಪುನಃ ವಾಹನದ ಬಳಿ ಬಂದು ಅದನ್ನು ಪರಿಶೀಲಿಸಿದಾಗ ಅದರಲ್ಲಿ ವಾಹನ ಸಂಖ್ಯೆ ಇರುವುದಿಲ್ಲ. ಸದರಿ ವಾಹನ 407 ಟೆಂಪೋವಾಗಿದ್ದು, ಅದರ ಹಿಂಭಾಗದಲ್ಲಿ ಒಂದು ಟಾರ್ಪಲ್ ಮುಚ್ಚಿರುತ್ತದೆ. ಅದನ್ನು ತೆಗೆದು ನೋಡಿದಾಗ ಅದರಲ್ಲಿ ಒಂದು ಗಂಡು , ಒಂದು ಹೆಣ್ಣು ಹಸುಗಳಿದ್ದು, ಒಂದು ಗಂಡು ಕರು ಇರುತ್ತದೆ.

ಸದರಿ ದನಗಳನ್ನು ಹಿಂಸಾತ್ಮಕ ರೀತಿಯಲ್ಲಿ ಕಟ್ಟಿದ್ದ ಕಾರಣ ಚಾಸಾ 1 ರವರು ದೂರನ್ನು ಠಾಣೆಗೆ ನೀಡಲು ನನಗೆ ತಿಳಿಸಿದ್ದು, ನಾನು ತೆಗೆದುಕೊಂಡು ಠಾಣೆಗೆ ಹೋಗಿ, ದೂರನ್ನು ನೀಡಿ, ಪುನಃ ಸ್ಥಳಕ್ಕೆ ಬಂದಿರುತ್ತೇನೆ. ಆಗ ಸಮಯ 8.50 ಆಗಿರುತ್ತದೆ. ಸ್ಥಳ ಮಹಜರು ಮಾಡುವ ಸಮಯದಲ್ಲಿ ನಾನು ಹಾಜರಿದ್ದೆ. ನಂತರ ವಾಹನ, ಮು.ಮಾಲುಗಳು ಮತುತ್ತ ಹಸುಗಳನ್ನು ಠಾಣೆಗೆ ತೆಗೆದುಕೊಂಡು ಹೋಗಿ ಪಿ.ಎಫ್ ಸಲ್ಲಿಸಿರುತ್ತೇನೆ.

ಈಗ ನ್ಯಾಯಾಲಯದ ಮುಂದೆ ಸದರಿ ಟರ್ಪಾಲು, ಒಂದು ಲೆದರ್ ಪರ್ಸ್ ಅದರಲ್ಲಿರುವ 100/- ರೂಗಳನ್ನು , ಹುರಿ ಹಗ್ಗಗಳು, ಡಿಎಲ್ ಮತ್ತು ಎರಡು ಎ.ಟಿ.ಎಮ್ ಕಾರ್ಡ್ ಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ಮು.ಮಾ. - 1 ಎಂದು ಗುರುತಿಸಲಾಗಿದ್ದು ಅದನ್ನು ನಾನು ಗುರುತಿಸುತ್ತೇನೆ. ಸ್ಥಳದಲ್ಲಿ ಫೋಟೋಗಳನ್ನು ತೆಗೆದಿದ್ದು, ಸದರಿ ವಾಹನ ಮತ್ತು ದನಗಳನ್ನು ನೋಡಿದರೆ ನಾನು ಗುರುತಿಸುತ್ತೇನೆ. ಸದರಿ ಗಂಡು ಹೋರಿಗೆ ಸಂಬಂಧಿಸಿದ 4 ಫೋಟೋಗಳನ್ನು ಒಟ್ಟಾಗಿ ನಿಪಿ - 5 ಎಂದು, ಹೆಣ್ಣು ಹಸುವಿಗೆ ಸಂಬಂಧಿಸಿದ 4 ಫೋಟೋಗಳನ್ನು ಒಟ್ಟಾಗಿ ನಿಪಿ - 6 ಎಂದು, ಕರುವಿಗೆ ಸಂಬಂಧಿಸಿದ ಎರಡು ಫೋಟೋಗಳನ್ನು ನಿಪಿ - 7 ಎಂದು ಈಗಾಗಲೇ ಗುರುತಿಸಲಾಗಿದ್ದು, ನಾನು ಪುನಃ ಅದನ್ನು ಗುರುತಿಸುತ್ತೇನೆ. ವಾಹನಕ್ಕೆ ಸಂಬಂಧಿಸಿದ 4 ಫೋಟೋಗಳನ್ನು ಒಟ್ಟಾಗಿ ಈಗಾಗಲೇ ನಿಪಿ - 8 ಎಂದು ಗುರುತಿಸಲಾಗಿದ್ದು, ಅದನ್ನು ಪುನಃ ಗುರುತಿಸುತ್ತೇನೆ. ನಾನು ಇದರ ಬಗ್ಗೆ

ತನಿಖಾಧಿಕಾರಿಗಳ ಸಮಕ್ಷಮ ಹೇಳಿಕೆ ನೀಡಿರುತ್ತೇನೆ. ದಿನಾಂಕ 25.03.2022 ರಂದು ಠಾಣೆಗೆ ಹಾಜರಾಗಿ ನಿರೀಕ್ಷಣಾ ಜಾಮೀನು ಪಡೆದು ಹಾಜರುಪಡಿಸಿರುತ್ತಾರೆ. ಅವರ ಹೆಸರು ಚೇತನ್ ಎಂದಿರುತ್ತದೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಹಾಜರಿರುವುದಿಲ್ಲ. ಗುರುತಿಸಲು ತಕರಾರು ಇರುವುದಿಲ್ಲ ಎಂದು ಆರೋಪಿ ಪರ ವಕೀಲರು ನುಡಿದಿರುತ್ತಾರೆ. ಆರೋಪಿಯನ್ನು ಗುರುತಿಸುವ ಬಗ್ಗೆ ತನಿಖಾಧಿಕಾರಿಗಳು ದಿಃ25.03.2022 ರಂದು ಪುನರ್ ಹೇಳಿಕೆಯನ್ನು ನೀಡಿರುತ್ತೇನೆ.

<u>ಪಾಟೀ ಸವಾಲುಃ</u> ಶ್ರೀ ಎಸ್.ಕೆ.ಎಮ್. ಆರೋಪಿ ಪರ ವಕೀಲರಿಂದಃ

ನಾನು ಸದರಿ ದಿನ ರೌಂಡ್ಸ್ ನಲ್ಲಿದ್ದೆ ಎಂದು ತೋರಿಸಲು ಠಾಣೆಯ ಡೈರಿಯಲ್ಲಿ ನಮೂದಿಸಿದ್ದೇನೆ. ಸದರಿ ಡೈರಿಯನ್ನು ತನಿಖಾಧಿಕಾರಿಗಳಿಗೆ ನೀಡಿದ್ದೇನೆ. ತನಿಖಾಧಿಕಾರಿಗಳು ಸದರಿ ಡೈರಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೋ ಇಲ್ಲವೋ ಎಂದು ನಾನು ತಿಳಿದುಕೊಂಡಿಲ್ಲ. ನಾನು ಸದರಿ ಡೈರಿಯನ್ನು ಹಾಜರುಪಡಿಸದ ಕಾರಣ ತನಿಖಾಧಿಕಾರಿಗಳು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ಸದರಿ ದಿನ ಠಾಣೆಯನ್ನು ರಾತ್ರಿ 10 ಗಂಟೆಗೆ ಬಿಟ್ಟಿರುತ್ತೇನೆ. ಸದರಿ ದಿನ ನಾವು 100 ಕ್ಕೂ ಹೆಚ್ಚು ಕಿಲೋಮೀಟರ್ ದೂರ ವಾಹನವನ್ನು

ಚಲಾಯಿಸಿದ್ದೇವೆ. ಪ್ರಾಥಮಿಕ ಆರೋಗ್ಯ ಕೇಂದ್ರದ ಬಳಿ ಇದ್ದಂತಹ ಟೆಂಪೋವನ್ನು ನಮ್ಮ ಎಸ್.ಐ ರವರು ಪ್ರಥಮ ಬಾರಿ ಗಮನಿಸಿದ್ದಾರೆ. ಸದರಿ ಟೆಂಪೋವು ನಾವು ಹೋಗುತ್ತಿದ್ದ ರಸ್ತೆಯ ಎಡಬದಿಯಲ್ಲಿ ನಿಂತಿತ್ತು. ಚಾಲಕನ ಜೊತೆ ಎಸ್.ಐ ರವರು, ವಾಹನವನ್ನು ಇಲ್ಲಿ ಯಾಕೆ ನಿಲ್ಲಿಸಿದ್ದು ಎಂದು ಪ್ರಶ್ನಿಸಿದಾಗ ಆತನು ಉತ್ತರ ನೀಡದೇ ವಾಹನ ಚಾಲನೆ ಮಾಡಿ ಹೋಗಿರುತ್ತಾನೆ.

ಈ ಪ್ರಕರಣದಲ್ಲಿ ವಶಪಡಿಸಿಕೊಂಡಿರುವಂತಹ ಹಸು ಮತ್ತು ಕರುಗಳ ಕಳ್ಳತನವಾಗಿದೆ ಎಂದು ಯಾವುದೇ ಠಾಣೆಗಳಲ್ಲಿ ದೂರು ನೀಡಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಅದರ ಬಗ್ಗೆ ಮಾಹಿತಿಯನ್ನು ನಮ್ಮ ಮೇಲಾಧಿಕಾರಿಗಳು ಪಡೆದುಕೊಂಡಿರಬಹುದು. ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಮು.ಮಾಗಳು ಮತ್ತು ಹಸು, ಕರುಗಳು ಕಳ್ಳತನವಾಗಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ವಶಪಡಿಸಿಕೊಂಡತಹ ಹಸು ಮತ್ತು ಕರುಗಳನ್ನು ಸ್ಥಳದಲ್ಲಿ ಪರಿಶೀಲಿಸಲು ವೈದ್ಯರನ್ನು ಸ್ಥಳಕ್ಕೆ ಕರೆಸಿರುವುದಿಲ್ಲ. ಸದರಿ ದನಗಳ ಮಾಲೀಕರು ಯಾರು ಎಂದು ನಾವು ಯಾರೂ ವಿಚಾರಿಸಿರುವುದಿಲ್ಲ.

ಘಟನಾ ಸ್ಥಳ ಅಂದರೆ ಆರೋಪಿಯು ವಾಹನವು ಬಿಟ್ಟು ಹೋಗಿರುವಂತಹ ಸ್ಥಳವು ಹಿರಿಯಡ್ಕ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಬರುತ್ತದೆ. ಸದರಿ ಸ್ಥಳದಿಂದ ನಮ್ಮ ಠಾಣೆಗೆ ಹೋಗಲು ಸುಮಾರು 45

ನಿಮಿಷವಾಗಬಹುದು. ದೂರು ನೀಡಲು ನಾನು 6.50 ರ ಸಮಯದಲ್ಲಿ ಠಾಣೆಗೆ ಹೋಗಿರುತ್ತೇನೆ. ಅಲ್ಲಿ ಸುಮಾರು 15 ನಿಮಿಷವಾಗಿದ್ದು, ನಂತರ ಸದರಿ ಸ್ಥಳಕ್ಕೆ ಹಿಂದಿರುಗಿರುತ್ತೇನೆ. ಆಗ ಸಮಯ ಅಂದಾಜು 8.30 ಆಗಿರಬಹುದು. ಮಹಜರಿಗೆ ನಾನು ಸಹಿ ಹಾಕಿರುವುದಿಲ್ಲ. ಮಹಜರಿಗೆ ಪಂಚರನ್ನು ಯಾವ ರೀತಿ ಬರಮಾಡಿಕೊಂಡಿದ್ದಾರೆ ಎಂದು ನನಗೆ ತಿಳಿದಿರುವುದಿಲ್ಲ. ನಾನು ಮಹಜರು ಮಾಡುವ ಸಮಯದಲ್ಲಿ ಹಾಜರಿರುವುದಿಲ್ಲ ಎಂದರೆ ಸರಿಯಲ್ಲ.

ಆರೋಪಿಯನ್ನು ಮೊದಲ ಬಾರಿ ಠಾಣೆಯಲ್ಲಿ ಅವರು ನಿರೀಕ್ಷಣಾ ಜಾಮೀನು ತಂದ ಸಮಯದಲ್ಲಿ ನೋಡಿರುತ್ತೇನೆ. ಆರೋಪಿಯ ಪೂರ್ವ ಪರಿಚಯ ನನಗೆ ಇರಲಿಲ್ಲ. ನಮ್ಮ ಮೇಲಾಧಿಕಾರಿಗಳು ಸೃಷ್ಟಿಸಿರುವ ಸುಳ್ಳು ಪ್ರಕರಣಕ್ಕೆ ಅನುಕೂಲವಾಗುವಂತೆ ಆರೋಪಿಯನ್ನು ಈ ಪ್ರಕರಣದಲ್ಲಿ ಸೇರಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವಂತಹ ಮು.ಮಾಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಗಳು ನೀಡಿದ ಸುಳ್ಳು ದೂರನ್ನು ದಾಖಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,

ಕಾರ್ಕಳ.